# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ. ನಂ. :117/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿ.ಎಸ್. ಗುರುರಾಜ ಶಾಸ್ತ್ರಿ | ಪಿ.ಡಬ್ಲ್ಯೂ: 1 |
| ತಂದೆಯ ಹೆಸರು | : | ವಿ.ಜಿ. ಸುಬ್ರಮಣ್ಯ ಶಾಸ್ತ್ರಿ | ಸಿ.ಡಬ್ಲ್ಯೂ: 1 |
| ವಯಸ್ಸು | : | 49 ವರ್ಷ | |
| ಉದ್ಯೋಗ | : | ಅರ್ಚಕರು | |
| ವಾಸ್ತವ್ಯ | : | ಶೃಂಗೇರಿ ಶಂಕರಮಠ, ಕಾರವಾರ | |

ಸತ್ಯ ಪ್ರತಿಜ್ಞೆಯ ಮೇರೆಗೆಃ 12-07-2022

## ಕಲಂ. 299 ರಡಿಯಲ್ಲಿ ಸಾಕ್ಷಿಯ ಸಾಕ್ಷ್ಯ ವಿಚಾರಣೆ

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದಃ**

ನಾನು 2009 ರಿಂದ ಕಾರವಾರದ ಶೃಂಗೇರಿ ಶಂಕರ ಮಠದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದೇನೆ.

ನಮ್ಮ ಕಾರವಾರದ ಶೃಂಗೇರಿ ಶಂಕರ ಮಠವನ್ನು ಬೆಳಿಗ್ಗೆ 7-00 ಗಂಟೆಗೆ ತೆರೆದು ಮದ್ಯಾಹ್ನ 12-30 ಕ್ಕೆ ಮುಚ್ಚುತ್ತೇವೆ. ಸಂಜೆ 4-30 ಕ್ಕೆ ತೆರೆದು ರಾತ್ರಿ 8-00 ಗಂಟೆಗೆ ಮಠವನ್ನು ಮುಚ್ಚುತ್ತೇವೆ. ದೇವಸ್ಥಾನದ ಕೀಲಿಯು ನನ್ನ ಹತ್ತಿರ ಇರುತ್ತದೆ. ದಿಃ 16-12-2016 ರಿಂದ 14-01-2017 ರ ತನಕ ಧನುರ್ಮಾಸ ಪೂಜಾ ಕಾರ್ಯಕ್ರಮದ ಇದ್ದ ಕಾರಣ ಬೆಳಿಗ್ಗೆ 4-30 ಕ್ಕೆ ತೆರೆದು ಮದ್ಯಾ 12-30 ಕ್ಕೆ ಮುಚ್ಚಿ ಪುನಃ 4-30 ಕ್ಕೆ ತೆರೆದು ರಾತ್ರಿ 8-00 ಗಂಟೆಗೆ ಮುಚ್ಚುತ್ತಿದ್ದೆವು.

ಸಿ.ಸಿ. ನಂ. : 117/2021

ಪಿ.ಡಬ್ಲ್ಯೂ: 1 ಸಿ.ಡಬ್ಲ್ಯೂ: 1

ದಿಃ 04-01-2017 ರಂದು ರಾತ್ರಿ 8-00 ಕ್ಕೆ ದೇವಸ್ಥಾನದ ಬಾಗಿಲನ್ನು ಮುಚ್ಚಿ ಮನೆಗೆ ಹೋಗಿದ್ದೆನು. ದಿಃ 05-01-2017 ರಂದು ಬೆಳಿಗ್ಗೆ 4-30 ಗಂಟೆಗೆ ದೇವಸ್ಥಾನದ ಬಾಗಿಲನ್ನು ತೆಗೆಯಲು ಹೋದಾಗ ಉತ್ತರ ದಿಕ್ಕಿನ ಬಾಗಿಲಿನ ಕೊಂಡಿಯನ್ನು ಮುರಿದು ಒಳಗೆ ಹೋಗಿರುವುದು ಕಂಡು ಬಂತು. ನಾನು ದೇವಸ್ಥಾನ ಒಳಗೆ ಹೋಗಿ ಪರಿಶೀಲಿಸಿದಾಗ ಗಣಪತಿ ದೇವರ ಬೆಳ್ಳಿ ಕವಚ, ಗಣಪತಿ ಮುರ್ತಿಯ ಹಣೆಯ ಮೇಲಿರುವ ಬಂಗಾರದ ತ್ರಿಶೂಲ, ಶಾರದಾ ಮುರ್ತಿಯ ಕುತ್ತಿಗೆಯ ಬಂಗಾರದ ಸರ, ನಾಲ್ಕು ಬಂಗಾರದ ಬಳೆ, ನಾಲ್ಕು ಬೆಳ್ಳಿಯ ಕವಚಗಳು, ಹಣೆಗೆ ಅಂಟಿಸಿದ ಬಂಗಾರದ ತಿಲಕ, ಕೆನ್ನೆ ಸರಪಳಿ, ಪ್ರಭಾವಳಿ ಮತ್ತು ಬೆಳ್ಳಿ ಛತ್ರಿ, ಶಂಕರಾಚಾರ್ಯ ಮುರ್ತಿಯ ಕೈಯಲ್ಲಿದ್ದ ಬೆಳ್ಗಿಯ ದಂಡ, ಬೆಳ್ಳಿಯ ರುದ್ರಾಕ್ಷಿ ಮಾಲೆ, ಬೆಳ್ಳಿಯ ಪಾದುಕೆ, ಬೆಳ್ಳಿಯ ತಟ್ಟೆ ಆರತಿ ತಟ್ಟೆ 5 ಬೆಳ್ಳಿಯ ನಿಲಾಂಜನ ಮತ್ತು 3000 ನಗದು ಹಣ ಕಳ್ಳತನ ಅಗಿರುವುದು ಕಂಡು ಬಂತು. ಆಗ ನಾನು ಸಮಿತಿಯವರಿಗೆ ತಿಳಿಸಿ ದೂರನ್ನು ನೀಡಿರುತ್ತೇನೆ.

ಸದ್ರಿ ದೂರನ್ನು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ದೂರು ಕೊಟ್ಟ ನಂತರ ಪೊಲೀಸರು ದೇವಸ್ಥಾನಕ್ಕೆ ಬಂದು ಕಳ್ಳತನ ಆದ ಜಾಗದಲ್ಲಿ ನಾನು ತೋರಿಸಿದಂತೆ ಸ್ಥಳ ಪಂಚನಾಮೆ ಜರುಗಿಸಿ ಎರಡು ಹಿತ್ತಾಳೆ ಬೀಗಗಳನ್ನು ಜಪ್ತು ಮಾಡಿಕೊಂಡು ನಕಾಶೆ ತೆಗೆದು ನನ್ನ ಸಹಿಗಳನ್ನು ಪಡೆದುಕೊಂಡು ಹೊಗಿರುತ್ತಾರೆ. ಸದ್ರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ನಕಾಶೆಯನ್ನು ಈಗ ನೋಡುತ್ತಿದ್ದು ಈಗ ನೋಡುತ್ತಿದ್ದು ಅದು ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ವಶಪಡಿಸಿಕೊಂಡ ಎರಡು ಹಿತ್ತಾಳೆ ಬೀಗಗಳನ್ನು ನೋಡಿದರೆ ಗುರುತಿಸುತ್ತೇನೆ.

ದೇವಸ್ಥಾನದಲ್ಲಿ ಕಳ್ಳತನವಾದ 1 ತಿಂಗಳ ಬಳಿಕ ಪೊಲೀಸರು ಹಣ, ಬೆಳ್ಳಿ ಮತ್ತು ಬಂಗಾರ ಕಳ್ಳತನ ಮಾಡಿದ ವ್ಯಕ್ತಿಗಳನ್ನು ತಪಾಸಣೆ ಮಾಡಿ ಹಿಡಿದು ಪೊಲೀಸ ಠಾಣೆಗೆ ತಂದು ನಂತರ ದೇವಸ್ಥಾನಕ್ಕೆ ಕರೆ ತಂದು ನನಗೆ ತೋರಿಸಿದರು. ಆಗ ನಾನು ಆರೋಪಿತರನ್ನು ನೋಡಿ ಗುರುತು

ಸಿ.ಸಿ. ನಂ. : 117/2021

ಪಿ.ಡಬ್ಲ್ಯೂ: 1 ಸಿ.ಡಬ್ಲ್ಯೂ: 1

ಹಚ್ಚಿ ಮರು ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ಕಳ್ಳತನ ಮಾಡಿದ ಚಿನ್ನ ಮತ್ತು ಬೆಳ್ಳಿಯನ್ನು ಕರಗಿಸಿ ಗಟ್ಟಿ ಮಾಡಿರುತ್ತಾರೆ ಎಂದು ಗೊತ್ತಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,

ಕಾರವಾರ